**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಎಡಿಎಂ. 2(1) ಶೈ. ವ ನಿ/ಸ್ಯಾಟ್ಸ್ ಹಾಜರಾತಿ/21-22 ದಿನಾಂಕ 08-04-2022

**ಜ್ಞಾಪನ**

ವಿಷಯ: 2021-22 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಾಜರಾತಿಯನ್ನು SATS ತಂತ್ರಾಂಶದಲ್ಲಿ ಇಂಧೀಕರಿಸುವ ಬಗ್ಗೆ.

ಉಲ್ಲೇಖ: (1) ಆಯುಕ್ತರ ಸುತ್ತೋಲೆ ಸಂಖ್ಯೆ: ಡಿ.ಎಸ್.ಇ. ಆರ್.ಟಿ.ಇ.ವಿ.ಜಿ/ ಪಿ.ಪ.ಕು/ 72/2018-19 ದಿನಾಂಕ: 18-01-2021

(2) ಈ ಕಛೇರಿಯ ಜ್ಞಾಪನ ಸಂಖ್ಯೆ: ಸಿ4(6) ಪೌಶಿ/ಪೌಶಾ/ಶಾ.ಕಾ.ಪ್ರಾ/ 55/21-22, ದಿನಾಂಕ:31-01-2022

(3) ಈ ಕಛೇರಿಯ ಜ್ಞಾಪನ ಸಂಖ್ಯೆ; ಎಡಿಎಂ 2(1) ಶೈ.ವ.ನಿ-02/21-22 ದಿನಾಂಕ: 23-01-2022

----

ಮೇಲಿನ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2021-22 ನೇ ಸಾಲಿಗೆ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ, ಪರೀಕ್ಷೆಗಳು, ಮೌಲ್ಯಾಂಕನ ವಿಶ್ಲೇಷಣೆ ಮಾಡಿ ಫಲಿತಾಂಶವನ್ನು SATS ನಲ್ಲಿ ಅಳವಡಿಸುವ ಬಗ್ಗೆ ಸವಿವರವಾದ ಸುತ್ತೋಲೆಯನ್ನು ದಿನಾಂಕ:18-01-2021 ರಂದು ಹೊರಡಿಸಿದ್ದು, ಅದರಂತೆ ಪ್ರಸ್ತುತ ಸಾಲಿಗೆ ನಾಲ್ಕು ರೂಪಣಾತ್ಮಕ ಪರೀಕ್ಷೆ ಮತ್ತು ವಾರ್ಷಿಕ ಪರೀಕ್ಷೆಗಳ ಕಲಿಕಾ ಪ್ರಗತಿಯನ್ನು ಹಾಗೂ ಹಾಜರಾತಿಯನ್ನು ನಿರ್ದಿಷ್ಟಪಡಿಸದಿದ್ದರೂ ವಾಸ್ತವ ಹಾಜರಾತಿಯ ವಿವರಗಳನ್ನು ಎಸ್.ಎ. ಟಿ.ಎಸ್ ನಲ್ಲಿ ಇಂಧೀಕರಿಸಲು ತಿಳಿಸಲಾಗಿದೆ. ಮುಂದುವರಿದು ಈ ಬಗ್ಗೆ ದಿನಾಂಕ:23-01-2022 ರಲ್ಲೂ ಸಹ ವಿವರವಾದ ಜ್ಞಾಪನ ನೀಡಿದ್ದು ಎಸ್. ಎ. ಟಿ. ಎಸ್. ತಂತ್ರಾಂಶದಲ್ಲಿ ವಿವರಗಳನ್ನು ದಿನಾಂಕ: 09-04-2022 ರಿಂದ 16-04-2022 ರೊಳಗೆ ಇಂಧೀಕರಿಸಲು ಸುತ್ತೋಲೆ ನೀಡಲಾಗಿದೆ. ಪ್ರಯುಕ್ತ ಯಾವುದೇ ವಿದ್ಯಾರ್ಥಿಯ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯಾಗದಂತೆ ಎಚ್ಚರ ವಹಿಸಿ, ತುರ್ತು ಕ್ರಮ ವಹಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು( ಆಡಳಿತ) ಹಾಗೂ ಉಪನಿರ್ದೇಶಕರು ( ಅಭಿವೃದ್ಧಿ) ಇವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ , ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರ ಮುಖಾಂತರ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಇತರೆ ಶಾಲಾ ಮುಖ್ಯಸ್ಥರಿಗೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಮುಖಾಂತರ.

ಪ್ರತಿಯನ್ನುಮಾಹಿತಿಗಾಗಿ:-

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ.
2. ಸಾ.ಶಿ.ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
3. ಹಿರಿಯ ಸಹಾಯಕ ನಿರ್ದೇಶಕರು ಎಸ್.ಎ.ಟಿ.ಎಸ್. ವಿಭಾಗ ಇವರಿಗೆ ಕಳುಹಿಸುತ್ತಾ ಮೇಲ್ಕಂಡ ವಿವರಗಳು ಇಂಧೀಕರಣ ಆಗಿರುವ ಬಗ್ಗೆ ಖಾತ್ರಿಪಡಿಸಲು ತಿಳಿಸಿದೆ.
4. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ ಇವರಿಗೆ ಕಳುಹಿಸುತ್ತಾ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸುವುದಕ್ಕಾಗಿ.
5. ಕಛೇರಿ ಪ್ರತಿ